ಸಾಲು ಮರಗಳನ್ನು ರಕ್ಷಿಸುವುದು

508. ಶ್ರೀ ಕೆ. ಎಂ. ದೊರೆಸ್ವಾಮಿ ನಾಯ್ಡು (ಬೇತಮಂಗಲ).—ಲೋಕೋಪಯೋಗಿ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:—

(ಅ) ರಾಜ್ಯದಲ್ಲಿರತಕ್ಕ ರಸ್ತೆಗಳ ಪಕ್ಕದಲ್ಲಿ ಬೆಳೆಸಿರತಕ್ಕ ಸಾಲು ಮರಗಳನ್ನು ಈ ಮೊದಲು ಬೆಳೆಸಿದವರು ಯಾರು ;

(ಆ) ಈಗ ಈ ರಸ್ತೆ ಪಕ್ಕದಲ್ಲಿರತಕ್ಕ ಮರಗಳನ್ನು ಯಾವ ಇಲಾಖೆಯವರ ವಶಕ್ಕೆ ವಹಿಸಿರುತ್ತಾರೆ ;

(ಇ) ಈಗ ಈ ಮರಗಳು ಯಾವ ಸ್ಥಿತಿಯಲ್ಲಿವೆ ಎಂಬುದು ಸರಕಾರದವರ ಗಮನಕ್ಕೆ ಬಂದಿದೆಯೇ ;

(ಈ) ಈ ಸಾಲು ಮರಗಳನ್ನು ರಸ್ತೆ ಪಕ್ಕದಲ್ಲಿರತಕ್ಕ ಹಿಡುವಳಿದಾರರ ವಶಕ್ಕೆ ಕೊಟ್ಟರೆ ಮರಗಳು ನಾಶವಾಗದೆ ಒಳ್ಳೆ ಸ್ಥಿತಿಯಲ್ಲಿರಬಹುದೆಂದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಮಂತ್ರಿಗಳು).—

(ಅ) ಬಹುತೇಕ ಮರಗಳನ್ನು ಸರ್ಕಾರೀ ಏಜೆನ್ಸಿಯವರು ಬೆಳೆಸಿದ್ದಾರೆ. ರಸ್ತೆಗಳ ಬಗ್ಗೆ ಈ ಮೊದಲು ಸ್ಥಳೀಯ ಮಂಡಲಿಯವರು ಪ್ರಭಾರ ವಹಿಸಿದ್ದು, ಅವರು ಕೂಡ ಮರಗಳನ್ನು ಬೆಳೆಸಿದ್ದರು. ಖಾಸಗೀ ವ್ಯಕ್ತಿಗಳು ಸಹ ಕೆಲವು ಮರಗಳನ್ನು ಬೆಳೆಸಿರುವುದಾಗಿ ತಿಳಿಸಿದ್ದಾರೆ.

(ಆ) ರಾಜ್ಯ ನಿಧಿ ರಸ್ತೆ ಪಕ್ಕದ ಮರಗಳು ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿವೆ.

(ಇ) ಬಂದಿದೆ.

(ಈ) ಇದು ಪರಿಶೀಲನಬೇಕಾದ ವಿಷಯ

ಶ್ರೀ ಕೆ. ಎಂ. ದೊರೆಸ್ವಾಮಿ ನಾಯ್ಡು.—'ಅ' ಪ್ರಶ್ನೆಗೆ ಉತ್ತರವಾಗಿ, ಸರ್ಕಾರಿ ಏಜೆನ್ಸಿಯವರು ಮತ್ತು ಖಾಸಗೀಯವರು ಮರಗಳನ್ನು ಬೆಳೆಸಿದ್ದಾರೆ ಎಂದು ತಿಳಿಸಿದ್ದಾರೆ. ಖಾಸಗಿಯವರು ಬೆಳೆಸಿರುವ ಮರಗಳನ್ನು ಅವರಿಗೇ ಹಕ್ಕುದಾರಿಗೆ ಕೊಟ್ಟಿದ್ದೀರೋ, ಅಥವಾ ಪಿ.ಡಬ್ಲ್ಯು.ಡಿ ವಶಕ್ಕೆ ತೆಗೆದುಕೊಂಡಿದ್ದೀರಾ ?

† ಶ್ರೀ ಎಚ್ ಎಂ. ಚನ್ನಬಸಪ್ಪ.—ಈಗಿರುವ ರೀತಿಯಲ್ಲಿ ರಸ್ತೆಗಳ ಪಕ್ಕದಲ್ಲಿರತಕ್ಕ ಎಲ್ಲಾ ಮರಗಳು ಪಿ.ಡಬ್ಲ್ಯು.ಡಿ.ಗೆ ಸೇರಿದವು. ಅದರಲ್ಲಿ ಯಾರಾದರೂ ಹಕ್ಕು ಇದೆ ಎಂದು ಮುಂದೆ ಬಂದರೆ, ಪರಿಶೀಲನೆ ಮಾಡಲು ಅಗತ್ಯವಿದ್ದ ಪಕ್ಷದಲ್ಲಿ ಯೋಚನೆ ಮಾಡುತ್ತೇವೆ.

ಶ್ರೀ ಕೆ. ಎಂ. ದೊರೆಸ್ವಾಮಿನಾಯ್ಡು.—ಪಿ.ಡಬ್ಲ್ಯು.ಡಿ. ತೆಗೆದುಕೊಂಡಿರುವ ಮರಗಳಲ್ಲಿ ಕೊಂಬೆಗಳೆಲ್ಲಾ ಹೊಡೆದು, ಬುಡಗಳು ಮಾತ್ರ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲೊಂದು ಇಲ್ಲೊಂದು ಮರದಲ್ಲಿ ಕಳ್ಳಕಾಕರು ತೆಗೆದು ಕೊಂಡು ಹೋಗುತ್ತಾರೆ ಎಂದು ಬಂದಿದೆಯೇ ವಿನಃ ಎಲ್ಲಾ ಸರ್ಕಾರದ ಮರಗಳೆಲ್ಲಿ ಹಾಗೆ ಆಗಿಲ್ಲ.

ಶ್ರೀ ಕೊಣಂದೂರು ಲಿಂಗಪ್ಪ.—ಕೆಲವು ಹಳೇ ಮರಗಳು ಏನಿವೆ ಅವುಗಳನ್ನು ಉರುಳಿಸುವುದಕ್ಕೆ ತಾವೇನಾದರೂ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತೀರ ಹಳೇ ಮರವಾಗಿದ್ದು, ಬುಡ ಸತ್ತು ಹೋಗಿರ್ದ ಪಕ್ಷದಲ್ಲಿ ಅಂತಹವುಗಳನ್ನು ಡಿಪಾರ್ಟ್‌ಮೆಂಟ್‌ನವರು ಕಡಿದು ಹರಾಜು ಹಾಕಲಿಕ್ಕೆ ತೆಗೆದು ಹಾಕುತ್ತಾರೆ.

ಶ್ರೀ ಎಚ್. ಜಿ. ಚನ್ನಪ್ಪ.—ನಮ್ಮ ಕಡೆ ರೋಡ್ ಸೈಡ್‌ನಲ್ಲಿ ಬಳ್ಳಾರಿ ಜಾಲಿ ಮರಗಳನ್ನು ಹಾಕಿಸಿದ್ದಾರೆ. ಅವುಗಳ ಬೀಜಗಳು ಸಿಡಿದು ಪಕ್ಕದಲ್ಲಿರುವ ಹೊಲಗಳೆಲ್ಲಿ ಹರಡತಕ್ಕ ಸನ್ನಿವೇಶ ವಿದೆ. ಅದನ್ನು ತಪ್ಪಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅರೀತಿ ಬೀಜಗಳು ಸಿಡಿದು ಬಂದರೆ ಅದನ್ನು ತೆಗೆದು ಹಾಕುವುದು ನಿಮ್ಮ ಕೆಲಸ. ಅರೀತಿ ಹೊಲದಲ್ಲಿ ಅಕ್ರಮ ಪ್ರವೇಶ ಮಾಡಿದರೆ ತೆಗೆದುಹಾಕುವುದು ನಿಮ್ಮ ಕೆಲಸ.

ಶ್ರೀ ಬಿ. ಬೈರಪ್ಪಾಜಿ —ಜನಗಳಿಗೆ ಮುಳ್ಳನ್ನು ಒದಗಿಸಲು ತಾವೇನಾದರೂ ಬಳ್ಳಾರಿ ಹಾಲ ಮರಗಳನ್ನು ಬೆಳೆಸಿದ್ದೀರಾ ?

ಶ್ರೀ ಎಚ್. ಎಂ ಚನ್ನಬಸಪ್ಪ.—ಬಳ್ಳಾರಿ ಹಾಲ ಮರಗಳು ರೈತರಿಗೆ ಉಪಯುಕ್ತವಾದ ಬೇಲಿಯನ್ನು ಹಾಕಲಿಕ್ಕೆ ಹೆಚ್ಚು ಸಹಾಯಕವಾಗುತ್ತವೆ.

ಶ್ರೀ ಕೊಣಂದೂರು ಲಿಂಗಪ್ಪ.—ಇಂದು ಕಾಂಗ್ರೆಸ್ ಹುಲ್ಲು ಬೆಳೆಯುತ್ತಿದೆ, ಅದನ್ನು ತಾವೇ ತಾನೇ ಬೆಳೆಸುತ್ತಿರುವುದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ನಮ್ಮ ಲಿಸ್ಟ್‌ನಲ್ಲಿ ಇಲ್ಲ.

1-30 P. M.

Kundanoor Lift Irrigations Scheme.

515. SMT. VIJAYA RAGHAVENDRA RAO (Chittapur).—Will the Minister of State for Minor Irrigation be pleased to state:—

(*a*) whether it is not a fact that number of representations were made to the Government for taking up the Lift Irrigation Scheme at Kundanoor, Taluk Chitapur since the year 1972 ;

(*b*) if so, whether there was any proposal to take up the said scheme in the year 1973-74 ;

(*c*) if so, at what stage the proposal is pending now ?

SRI S. B. NAGARAL.—(Minister of State for Minor Irrigation) .—

(*a*) No.

(*b*) and (*c*) Does not arise in view of reply to Clause (*a*) above.

SMT. VIJAYA DESAI —Is it not a fact that plans and estimates were ready for the scheme ?

† ಶ್ರೀ ಎಸ್. ಬಿ. ನಾಗರಾಳ —ಇನ್ನೂ ತನಿಖೆ ಮುಗಿದಿಲ್ಲ. ತನಿಖೆ ಆದಮೇಲೆ ನೋಡುತ್ತೇವೆ

SMT. VIJAYA DESAI. – Is it not included in this year's budget ?

SRI S. B. NAGARAL.— After getting that information we will be able to include in the budget.

SMT. VIJAYA DESAI.—What is the probable estimated cost of the project ?

SRI. S. B. NAGARAL.— Madam, the project is still under investigation. Soon after the completion of project report I will be able to tell the estimated cost of the project.